<u>ಸಾಕ್ಷಿಯನ್ನು ದಿನಾಂಕಃ**10.01.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>**ಪಾಟೀ ಸವಾಲುಃ ವಾದಿ ಪರ ಶ್ರೀ.ಹೆಚ್.ಸಿ.ಪಿ.ವಕೀಲರಿಂದ:**</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಈ ದಾವೆಯನ್ನು ಜಾಗ ತಮ್ಮದು ಎಂದು ಹೂಡಿರುತ್ತಾರೆ. 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು. ಸದರಿ ಮಕ್ಕಳಿಗೆ 25 ಮತ್ತು 18 ವರ್ಷ ವಯಸ್ಸು ಇರುತ್ತದೆ. 1 ನೇ ಪ್ರತಿವಾದಿಯ ಮಕ್ಕಳಿಗೆ ಗೊತ್ತಿಲ್ಲದಂತೆ ನಿಡಿ.6 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಅತ್ತಿಗೆ. ಸದರಿಯವರು ನನ್ನ ದೊಡ್ಡಪ್ಪನ ಮಗನ ಹೆಂಡತಿಯಾಗಿರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನಾನು 1 ನೇ ಪ್ರತಿವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ವಾದಿ ನಿಪಿ.2 ರಂತೆ ಕ್ರಯ ಮಾಡಿಕೊಂಡ ವಿಚಾರ ನನಗೆ ಗೊತ್ತು. ನಿಪಿ.2 ರ ಚೆಕ್ಕು ಬಂದಿ ಸುಳ್ಳು ಇರುತ್ತದೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ದಾವೆ ಸಲ್ಲಿಸುವ ಪೂರ್ವದ ವಿಚಾರಗಳು ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಿದ ನಂತರದ ವಿಚಾರಗಳು ನನಗೆ ಗೊತ್ತು.

1 ನೇ ಪ್ರತಿವಾದಿ ದೊಡ್ಡಕದಲಯ್ಯನ ಮಗ ಜಯರಾಮಯ್ಯರವರಿಂದ ಖಾತೆ ನಂ.63 ನ್ನು ಖರೀದಿ ಮಾಡಿರುತ್ತಾರೆ. ಪೂರ್ವ-ಪಶ್ಚಿಮ 60 ಅಡಿ, ಉತ್ತರ–ದಕ್ಷಿಣ 30 ಅಡಿ ಖರೀದಿ ಮಾಡಿರುತ್ತಾರೆ. 1 ನೇ ಪ್ರತಿವಾದಿಯ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ಸದರಿ ಕ್ರಯ ಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಸದರಿ ಚೆಕ್ಕು ಬಂದಿ ಪೂರ್ವಕ್ಕೆಃ ದೊಡ್ಡಮ್ಮ ಮತ್ತು ತಿರುಗಾಡುವ ರಸ್ತೆ, ಪಶ್ಚಿಮಕ್ಕೆಃ ಡೊಳ್ಳಯ್ಯ, ಉತ್ತರಕ್ಕೆಃಪದ್ಮ ಮತ್ತು ವೆಂಕಟಮ್ಮ ಮತ್ತು ದಕ್ಷಿಣಕ್ಕೆಃ ನಂಜೇಗೌಡ. 1 ನೇ ಪ್ರತಿವಾದಿಯ ಕ್ರಯ ಪತ್ರದಲ್ಲಿ ಪೂರ್ವಕ್ಕೆಃ ಚಿಕ್ಕ ಕದಲಯ್ಯರವರ ಜಮೀನು ಇದೆ ಎಂದರೆ ಸರಿಯಲ್ಲ. ಆ ರೀತಿ ಇದ್ದರೂ ಪೂರ್ವಕ್ಕೆ ರಸ್ತೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಾಗುತ್ತದೆ ಎಂದು 1 ನೇ ಪ್ರತಿವಾದಿಯ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ 1 ನೇ ಪ್ರತಿವಾದಿಯ ಕ್ರಯ ಪತ್ರದ ಯಾವ ಚೆಕ್ಕು ಬಂದಿಗೂ ವಾದಿಯ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೂರ್ವಕ್ಕೆ ಬರುತ್ತಾರೆ ಎಂದು ನುಡಿಯುತ್ತಾರೆ.

ವಾದಿಯ ಕ್ರಯ ಪತ್ರ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿ ದಿನಾಂಕಃ22.09.2007 ರಲ್ಲಿ 1 ನೇ ಪ್ರತಿವಾದಿ ಆಸ್ತಿ ಖರೀದಿ ಮಾಡುವ ಮೊದಲೇ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಖರೀದಿ ಮಾಡಿದ ಆಸ್ತಿ ಖಾಲಿ ಸ್ವತ್ತಾಗಿತ್ತು. ವಾದಿ ತಾನು ಖರೀದಿ ಮಾಡಿದ ಆಸ್ತಿಯಲ್ಲಿ ಸ್ವಲ್ಪ ಭಾಗದಲ್ಲಿ ಮನೆ ಕಟ್ಟಿರುತ್ತಾರೆ. ವಾದಿಯು 20X47 ಅಳತೆಗೆ ಮನೆ ಕಟ್ಟಿರುತ್ತಾರೆ. ವಾದಿ 15X20 ಅಡಿ ಅಳತೆಗೆ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ವಿಸ್ತೀರ್ಣ 47½X20 ಅಡಿಯಲ್ಲಿ ವಾದಿಯು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ತೋರಿಸಿರುವ ಚೆಕ್ಕು ಬಂದಿಯಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು ಚೆಕ್ಕು ಬಂದಿ ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ.3, 9 ರಿಂದ 14ರ ದಾಖಲೆಗಳು ಒಬ್ಬರೇ ಅಧಿಕಾರಿಗಳು ನೀಡಿರುವ ದಾಖಲೆಗಳಾಗಿರುತ್ತವೆ ಎಂದರೆ ಸರಿ. ಸದರಿ ದಾಖಲೆಗಳನ್ನು ಈ ದಾವೆಗೆಂದು ತಂದಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಗಳನ್ನು ಪಡೆಯಲು 1 ನೇ ಪ್ರತಿವಾದಿ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಿಡಿ.9 ರಿಂದ 14ರ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.15 ಮತ್ತು ನಿಡಿ.17 ದಾಖಲೆಗಳನ್ನು ದಾವೆಗೆಂದು ನಾವೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.9 ರಿಂದ ನಿಡಿ.15 ಮತ್ತು ನಿಡಿ.17 ರಲ್ಲಿ ಕೊಟ್ಟ ದಿನಾಂಕವನ್ನು ನಮೂದು ಮಾಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.